ದಿನಾಂಕ: ಜನವರಿ 19,2014

# ಬೀದಿಗಿಳಿದರೆ ಹೆಚ್ಚು ನೆಮ್ಮದಿ

-ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಗೃಹ ಸಚಿವರ ಮನೆ ಮುಂದೆ ತಮ್ಮ ಪಕ್ಷದ ಸದಸ್ಯರೊಂದಿಗೆ ಮುಷ್ಕರ ನಡೆಸಲು ದೆಹಲಿ ಮುಖ್ಯ ಮಂತ್ರಿ ನಿರ್ಧರಿಸಿದ್ದಾರೆ. ಅವರ ಪ್ರಕಾರ ಕರ್ತವ್ಯ ವಿಮುಖರಾದ ಮೂರು ಪೋಲಿಸ್ ಸಿಬ್ಬಂದಿಗಳನ್ನು ಅಮಾನತ್ತಿನಲ್ಲಿಡಬೇಕು ಎಂದು ಅವರು ಆಗ್ರಹಿಸುತ್ತಿದ್ದಾರೆ. ಶಾಸಕಾಂಗದ ಕರ್ತವ್ಯ ನಿರ್ವಹಿಸುವುದಕ್ಕಿಂತ ಮುಷ್ಕರ ಹೂಡುವುದರಲ್ಲಿ ಎಎಪಿ ಹೆಚ್ಚು ನೆಮ್ಮದಿ ಕಂಡಿದೆ ಎಂದು ಇದರಿಂದ ತಿಳಿಯಬಹುದು. ಶಾಸನದಲ್ಲೂ ಆ ಪಕ್ಷ ಸ್ವಯಂಕೃತ ನಾಶದ ಮನೋಭೂಮಿಕೆ ಅನುಸರಿಸುತ್ತಿರುವುದನ್ನು ಕಳೆದ ಮೂರು ವಾರಗಳಲ್ಲಿ ನೋಡಬಹುದು.

ದೇಶಾದ್ಯಂತ ಅದರ ಸದಸ್ಯರು ಆಡುವ ಭಾಷೆ ಭಿನ್ನವಾಗಿದೆ. ಸಂಘಟನೆಯಲ್ಲಿ ಶಿಸ್ತು ಕಾಣದು. ವಿಚಾರವಾದಿಗಳು, ಹೋರಾಟಗಾರರು, ಒಂದು ವಾದ ಮತ್ತು ನಂಬಿಕೆಗೆ ಅಂಟಿಕೊಂಡವರನ್ನು ಪಕ್ಷ ಹೊಂದಿದೆ. ಪಕ್ಷವನ್ನು ಬೆಂಬಲಿಸಿದವರಲ್ಲಿ ಕೆಲವರು ಆದರ್ಶಪ್ರಾಯರಾಗಿ ಪಕ್ಷ ಸೇರಿದ್ದಾರೆ ಅಥವಾ ಮತ ನೀಡಿದ್ದಾರೆ. ಪಕ್ಷ ಕಟ್ಟುವುದು ಹಾಗೂ ಸರ್ಕಾರ ನಿರ್ವಹಿಸುವುದಕ್ಕಿಂತ ಮುಷ್ಕರ ಹೂಡುವುದು ಭಿನ್ನವಾಗಿದೆ. ದೆಹಲಿಯಲ್ಲಿ ವಾಸವಾಗಿರುವ ಆಫ್ರಿಕಾ ನಾಗರಿಕರ ವಿಚಾರದಲ್ಲಿ ಪಕ್ಷದ ಕಾನೂನು ಸಚಿವರು ದೆಹಲಿಯಲ್ಲಿ ಗಂಭೀರ ಸಮಸ್ಯೆ ಸೃಷ್ಟಿಸಿದ್ದಾರೆ. ಅವರಲ್ಲಿ ವರ್ಣಭೇಧದ ಮನೋಭಾವ ಇದ್ದಂತಿದೆ. ಅಧಿಕಾರಾವಧಿಯ ಅಲ್ಪಾವಧಿಯಲ್ಲೇ ಪಕ್ಷ ತನ್ನ ಅಸಂಪ್ರದಾಯಿಕ ಶೈಲಿಗೆ ಬಲಿಯಾದಂತೆ ಕಾಣುತ್ತಿದೆ. ಜನಸಮೂಹ ನಿರ್ಣಯಿಸದು. ಕೇವಲ ಜನಮೆಚ್ಚಿಸುವ ಪ್ರಯತ್ನ ನಡೆಯಬಹುದು. ಪಕ್ಷ ದೆಹೆಲಿಯಲ್ಲಿ ಸರ್ಕಾರ ರಚಿಸುವ ಮೂಲಕ ದೇಶಾದ್ಯಂತ ತಮ್ಮ ಸಮರ್ಥಕರನ್ನು ಹುರಿದುಂಬಿಸುವ ಪ್ರಯತ್ನವನ್ನು ಪ್ರಾಥಮಿಕ ಹಂತದಲ್ಲಿ ಮಾಡಿದ್ದು ಕಾಣಬಹುದು. ಆದರೆ ಇಂದು ಸರ್ಕಾರ ರಚಿಸಿದ ಪಕ್ಷದ ಕಾರ್ಯವೈಖರಿ ದಿನನಿತ್ಯ ಮುಜುಗರಕ್ಕೆ ಕಾರಣವಾಗುತ್ತಿದೆ. ಕಾಂಗ್ರೆಸ್‌ನೊಂದಿಗೆ ಮಾಡಿಕೊಂಡ ಪಾರದರ್ಶಕತೆ ಇಲ್ಲದ ಹೊಂದಾಣಿಕೆ ಮುರಿಯುವ ಉದ್ದೇಶವನ್ನು ಈ ಒಂದು ದಿವಸದ ಮುಷ್ಕರ ಹೊಂದಿದೆಯೆ? ಸರ್ಕಾರದಿಂದ ನಿರ್ಗಮಿಸಿ ಬೀದಿಗೆ ಇಳಿಯುವ ಮಾರ್ಗೋಪಾಯ ಹುಡುಕುವ ಪ್ರಯತ್ನವನ್ನು ಎಎಪಿ ಮಾಡುತ್ತಿದೆಯೇ? ಅಥವಾ ಎಎಪಿ ಒತ್ತಡಕ್ಕೆ ಗೃಹ ಸಚಿವರು ಮಣಿಯುವರು ಮತ್ತು ಸಿದ್ಧತೆಯಿಲ್ಲದ ಕಾಂಗ್ರೆಸ್ ಪಕ್ಷವನ್ನು ಬಳಸಿಕೊಳ್ಳಬಹುದು ಎಂಬ ಉದ್ದೇಶ ಅದಕ್ಕಿದೆಯೆ?